ಆದರ ಮೇಲೆ ಏನು ಆಕ್ಷನ್ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಅಷ್ಟು ಬೇಗ ಸ್ವಾಧೀನ ಕೊಡುವುದಿಲ್ಲ.

ಶ್ರೀ ಕೆ.ಬಿ. ಶಿವಮ್ಮ.—ಮಾನ್ಯ ಮಂತ್ರಿಗಳು ಇದಕ್ಕೆ ಕಾಲಾವಕಾಶ ಬೇಕು ಅಂತ ಹೇಳಿದ್ದಾರಲ್ಲಾ ಅಲ್ಲಿಯವರೆಗೆ ಇದರಲ್ಲಿರುವ ೩ ಕೋಟಿ ರೂಪಾಯಿ ಬೆಲೆ ಬಾಳುವ ಮರಗಳು ನಾಶವಾಗುವುದಿಲ್ಲವೆ, ಬೇರೆಯವರಿಗೆ ಪರಭಾರೆಯಾಗುವ ಜಮೀನನ್ನು ಉಳಿಸಿಕೊಳ್ಳಲು ಬೇಗನೆ ಪ್ರಯತ್ನ ಮಾಡಬೇಡವೇ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಮೊದಲೇ ಹೇಳಿದ್ದಾರಲ್ಲಾ, ಅಷ್ಟು ಬೇಗ ಆ ಜಮೀನನ್ನು ಸ್ವಾಧೀನ ಕೊಡುವುದಿಲ್ಲ ಎಂದು ಹೇಳಿದ್ದೀರಲ್ಲಾ. ಮುತ್ತೇಕೆ ಪ್ರಶ್ನೆ ಎತ್ತುತ್ತೀರಿ. ಇನ್ನು ಈಗ ಮುಂದಿನ ಕಾರ್ಯಕಲಾಪಗಳಿಗೆ ಹೋಗೋಣ.

312ನೇ ನಿಯಮದ ಮೇರೆಗಿನ ವಿಷಯಂಗಳು

ವಿಷಯ.—ನಮ್ಮ ರಾಜ್ಯಕ್ಕೆ ವಿದ್ಯುತ್ ಸರಬರಾಜಿನ ಸಂಬಂಧದಲ್ಲಿ ಮಾಡಿಕೊಂಡ ದ್ವಿಪಕ್ಷೀಯ ಒಪ್ಪಂದ.

† ಶ್ರೀ ಎಂ. ಸಿ. ಬಸಪ್ಪ.—ವಿಧಾನ ಸಭೆಯ ರೂಲ್ಸ್ ಆಫ್ ಪ್ರೊಸೀಜರ್ ೩೧೨ರ ಕೆಳಗೆ ಕೇರಳ ಸರ್ಕಾರದೊಂದಿಗೆ ನಮ್ಮ ರಾಜ್ಯಕ್ಕೆ ವಿದ್ಯುತ್ ಸರಬರಾಜಿನ ಸಂಬಂಧದಲ್ಲಿ ಮಾಡಿಕೊಂಡ ದ್ವಿಪಕ್ಷೀಯ ಒಪ್ಪಂದದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ ನನಗೆ ಗೊತ್ತಿದ್ದ ಹಾಗೆ, ನನಗೆ ತಿಳಿದ ಮಾಹಿತಿ ಪ್ರಕಾರವಾಗಿ ಕೇರಳ ರಾಜ್ಯದಿಂದ ಕರ್ನಾಟಕ ರಾಜ್ಯಕ್ಕೆ ವಿದ್ಯುತ್ ಸರಬರಾಜು ಆಗಬೇಕೆಂದು ೧೯೭೮ರಲ್ಲಿ ಒಂದು ಒಪ್ಪಂದ ಆಗಿತ್ತು. ಈ ಒಂದು ರಿಟನ್ ಆಗ್ರಿಮೆಂಟ್ ೧೨ನೇ ಫೆಬ್ರುವರಿ ೧೯೭೯ರಲ್ಲಿ ಆಯಿತು. ಆದರ ಪ್ರಕಾರ ಕೇರಳ ಸರ್ಕಾರದವರು ಕರ್ನಾಟಕ ರಾಜ್ಯಕ್ಕೆ ವರ್ಷಕ್ಕೆ ಕೊನೇ ಪಕ್ಷ ೧೦೦೦ ಮಿಲಿಯನ್ ಯೂನಿಟ್ಸ್ ವಿದ್ಯುತ್ ಸರಬರಾಜು ಮಾಡಬೇಕೆಂದು ಒಪ್ಪಿಕೊಂಡಿದ್ದಾರೆ. It should be in force for the period of three years. ಕೊನೇ ಪಕ್ಷ ಈ ಒಪ್ಪಂದ ೩ ವರ್ಷ ಕಾಲವಾದರೂ ಇರಬೇಕು ಅಂತ ಆಗಿದೆ. ಈ ಒಪ್ಪಂದದ ಅವಧಿಯಲ್ಲಿ ಒಂದು ಯೂನಿಟ್‌ಗೆ ೨೩ ಪೈಸೇಯನ್ನು ವಿಧಿಸಬೇಕು ಎನ್ನ ತಕ್ಕಂಥಾದ್ದನ್ನೂ ಕೂಡ ಅವರು ಒಪ್ಪಿಕೊಂಡಿದ್ದಾರೆ.

೨–೩೦ ಪಿ.ಎಂ.

ಮೂರು ವರ್ಷಗಳ ಕಾಲ ಒಪ್ಪಂದ ಇರಬೇಕಾಗಿತ್ತು, ಒಂದು ವರ್ಷ ಅಲ್ಲ. ಒಂದು ಅತ್ಯಾಶ್ಚರ್ಯವಾದ ಸಂಗತಿಯೆಂದರೆ, ಮೊಟ್ಟಮೊದಲನೆಯ ಬಾರಿಗೆ ಬಹುಶ: ಜನವರಿ ನಾಲ್ಕನೆಯ ತಾರೀಖಿಗೆ ಕೇರಳದ ವಿದ್ಯುಚ್ಛಕ್ತಿ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು. ಅದೇನೆಂದರೆ ಕರ್ನಾಟಕ ರಾಜ್ಯದಿಂದ ವಿದ್ಯುಚ್ಛಕ್ತಿ ಬಾಕಿ ೭ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಹಣವನ್ನು ಕೊಡಬೇಕಾಗಿದೆ ಎಂದು. ಈ ಹಣವನ್ನು ಕೊಡದಿದ್ದರೆ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಬೇಕಾಗುತ್ತದೆಂದು ಅವರು ಕೊಚ್ಚಿನ್‌ನಲ್ಲಿ ಹೇಳಿಕೆ ಕೊಟ್ಟರು. ಮಾರನೆಯ ದಿವಸ ಪತ್ರಿಕೆಯಲ್ಲಿ ಬಂತು, ಏನೆಂದರೆ, ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಹೇಳಿದ್ದಾರೆ, ೭ ಕೋಟಿ ರೂಪಾಯಿಗಳು ಇರಲಾರದು ಸುಮಾರು ೧ ¾ ಕೋಟಿ ರೂಪಾಯಿಗಳಾಗಬಹುದೆಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ, ನಮ್ಮ ರಾಜ್ಯದ ಹಣಕಾಸಿನ ಮಂತ್ರಿಗಳು ಬೆಳಿಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಕೇರಳ ರಾಜ್ಯಕ್ಕೆ ಕರ್ನಾಟಕ ರಾಜ್ಯದಿಂದ ವಿದ್ಯುಚ್ಛಕ್ತಿ ಬಾಕಿ ೩–೪ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆಯೆಂದೂ. ಮಾನ್ಯ ವೀರಪ್ಪ ಮೊಯಿಲಿಯವರು ಧಾರವಾಡದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಬೆಂಗಳೂರಿಗೆ ಬಂದ ಮೇಲೆ ವಿದ್ಯುಚ್ಛಕ್ತಿ ಬಾಕಿ ೭ ಲಕ್ಷ ರೂಪಾಯಿಗಳು ಎಂದೂ, ಅದನ್ನು ಪಾವತಿ ಮಾಡಲು ಶೀಘ್ರ ಕ್ರಮ ತೆಗೆದುಕೊಳ್ಳುತ್ತೇವೆಂದೂ ಹೇಳಿದರು. ಈ ಹೇಳಿಕೆಗಳೆಲ್ಲಾ ಆದಮೇಲೆ ಒಂದು ಒಪ್ಪಂದ ವಾಯಿತು. ನಮ್ಮ ರಾಜ್ಯದ ಹಣಕಾಸಿನ ಮಂತ್ರಿಗಳು ಮತ್ತು ವಿದ್ಯುಚ್ಛಕ್ತಿ ಇಲಾಖಾ ಮಂತ್ರಿಗಳು

ಕೇರಳ ರಾಜ್ಯಕ್ಕೆ ಹೋದರು. ಅಲ್ಲಿಯ ಮಂತ್ರಿಗಳ ಜೊತೆಯಲ್ಲಿ ಕುಳಿತು ಮಾತನಾಡಿದರು. ಅವರವರ ಬಾಕಿಯೇನು ಬರಬೇಕೆಂಬುದರ ಬಗ್ಗೆ ಇಬ್ಬರೂ ತಾಲಸೆಮಾಡಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಕರ್ನಾಟಕದಿಂದ ವಿದ್ಯುಚ್ಛಕ್ತಿ ಬಾಕಿ ೭ ಕೋಟಿ ರೂಪಾಯಿಗಳೆಂದು ಹೇಳಿಕೆ ನೀಡುವ ಮೊದಲೇ ಕರ್ನಾಟಕದಿಂದ ೨.೫೨ಕೋಟಿ ರೂಪಾಯಿಗಳನ್ನು ಪಾವತಿ ಮಾಡಿದ್ದಾರೆ. ಬ್ಯಾಂಕಿನವ್ಯವಹಾರದಿಂದ ಸಕಾಲದಲ್ಲಿ ಅವರ ಕೈಗೆ ೫ಕ್ಕೆಲ್ಲವೆಂದು ಗೊತ್ತಾಯಿತು. ಜನವರಿ ೬ನೇ ತಾರೀಖಿನ ಒಂದು ಕಂತನ್ನು ಅಂದರೆ ೧.೫೫ ಕೋಟಿ ರೂಪಾಯಿಗಳನ್ನು ಪಾವತಿ ಮಾಡಿದ್ದಾರೆ. ಸ್ವಲ್ಪ ಹೆಚ್ಚುಕಡಿಮೆ ೪ ಕೋಟಿ ರೂಪಾಯಿಗಳನ್ನು ಮಂತ್ರಿಗಳು ಸೆಟ್‌ಮೆಂಟ್ ಮಾಡಿದ ಮೇಲೆ ಪಾವತಿ ಮಾಡಿದ್ದಾರೆ. ಇದರ ಪರಿಣಾಮ ಏನಾಯಿತು. What are the repercussions and the effects on the State exchequer ? ಸ್ವಾಮಿ, ಒಂದು ಮಾತನ್ನು ಸರ್ಕಾರಕ್ಕೆ ಹೇಳಬೇಕಾಗಿದೆ. ಮಾನ್ಯ ಹಣಕಾಸಿನ ಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಹಣಕಾಸಿನ ಮೇಲೆ ಹಿಡಿತವನ್ನು ಅಥವಾ ಜವಾಬ್ದಾರಿಯನ್ನು ಹೊತ್ತಂತಹ ಮಂತ್ರಿಗಳು. ಕೇರಳದಿಂದ ಒಬ್ಬ ಮಂತ್ರಿ ಮಾಡಿದಂತಹ ಹೇಳಿಕೆಗೆ ಪ್ರತಿ ಹೇಳಿಕೆ ಕೊಡುವಾಗ ನಮ್ಮ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳಿಂದ ವೈರಿಫೈ ಮಾಡಿದರೆ, ವಿದ್ಯುಚ್ಛಕ್ತಿ ಬಾಕಿ ೭ ಕೋಟಿ ರೂಪಾಯಿಗಳು ಅಲ್ಲ, ೫-೪ ಲಕ್ಷ ರೂಪಾಯಿಗಳು ಮಾತ್ರ ಕೊಡಬೇಕು ಎಂದು ಹೇಳಿದರು. ಇದು ಜವಾಬ್ದಾರಿಯುತವಾದ ಹೇಳಿಕೆಯಲ್ಲ. ಆದಕ್ಕಾಗಿ ಸರ್ಕಾರದ ಹಣಕಾಸಿನ ಮಂತ್ರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದು ಖಂಡನೀಯ. ಜವಾಬ್ದಾರಿಯನ್ನು ಹೊತ್ತಂತಹ ಮಂತ್ರಿಯಾಗಿದ್ದರೆ, ಕೇರಳದ ಮಂತ್ರಿಯಿಂದ ಹೇಳಿಕೆ ಬಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಿಸಿಕೊಂಡು, ವಿದ್ಯುಚ್ಛಕ್ತಿ ಮಂಡಳಿಯವರನ್ನು ಕರೆದು ಕರಾರುವಾಕ್ಕಾಗಿ ಎಷ್ಟು ಕೊಡಬೇಕೆಂಬುದನ್ನು ತಿಳಿದುಕೊಂಡು ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಇನ್ನೊಂದು ದುಷ್ಪರಿಣಾಮ ಏನಾಗಿದೆಯೆಂದರೆ, ಹಣಕಾಸಿನ ಮಂತ್ರಿಗಳು ಮತ್ತು ವಿದ್ಯುಚ್ಛಕ್ತಿ ಇಲಾಖಾ ಮಂತ್ರಿಗಳು ಕೇರಳ ರಾಜ್ಯಕ್ಕೆ ಹೋಗಿ ಒಂದು ಒಪ್ಪಂದವನ್ನು ಮಾಡಿಕೊಂಡು ಬಂದಿದ್ದಾರೆ. ಹಿಂದೆ ಫೆಬ್ರುವರಿ ೧೨, ೧೯೭೯ರಲ್ಲಿ ಆಗಿದ್ದಂತಹ ಒಪ್ಪಂದವನ್ನು ಸಂಪೂರ್ಣವಾಗಿ ಬದಿಗೊತ್ತಿದ್ದಾರೆ. ಇದರ ಬಗ್ಗೆ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಆಗಿದ್ದಂತಹ ಅಗ್ರಿಮೆಂಟನ್ನು ಏತಕ್ಕೆ ಎನ್‌ಫೋರ್ಸ್ ಮಾಡಲಿಲ್ಲ ? ಈಗ ಮಾಡಿಕೊಂಡು ಬಂದಿರತಕ್ಕ ಒಪ್ಪಂದ ಒಂದು ವರ್ಷ ಕಾಲ-ಅದೂ ತಾತ್ಕಾಲಿಕವಾಗಿ. ಹಿಂದೆ ೪ ಲಕ್ಷ ಮಿಲಿಯನ್ ಯೂನಿಟ್ ಕೊಡುತ್ತೇವೆಂದು ಕೇರಳದವರು ಒಪ್ಪಿಕೊಂಡಿದ್ದರು. ಆದರೆ, ಈಗ ೨ ಲಕ್ಷ ಮಿಲಿಯನ್ ಯೂನಿಟ್‌ಗಳಿಗಿಂತ ಜಾಸ್ತಿ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದಾಗ, ಹಿಂದೆ ಆಗಿದ್ದಂತಹ ಅಗ್ರಿಮೆಂಟನ್ನು ನೀವು ಯಾಕೆ ಇನ್‌ಸಿಸ್ಟ್ ಮಾಡಲಿಲ್ಲ ? ಹಿಂದೆ ಮೂರು ವರ್ಷಗಳ ಕಾಲ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತೇವೆಂದು ಒಪ್ಪಿಕೊಂಡಿದ್ದರು. ಈಗ ಒಂದು ವರ್ಷ ಮಾತ್ರ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಹಿಂದಿನ ಅಗ್ರಿಮೆಂಟ್ ಪ್ರಕಾರ ೩ ವರ್ಷ ಕಾಲ ಇತ್ತು, ಈಗ ನಾವು ಒಂದು ವರ್ಷಕ್ಕೆ ಒಪ್ಪಿಕೊಂಡಿದ್ದೀರಿ, ಇನ್ನು ಎರಡು ವರ್ಷಗಳ ಒಪ್ಪಂದ ಏನಾಯಿತು ? ಪೀಕ್ ಲೋಡ್ ಆವರ್ ಸರ್ವೀಸ್ ಬಗ್ಗೆ ತಮ್ಮ ಒಪ್ಪಂದದ ಪ್ರಕಾರ ಜಂಟಿ ಹೇಳಿಕೆಯನ್ನು ಮಾಡಿದ್ದೀರಿ. ಅದನ್ನು ನಾವು ನೋಡುವುದಾದರೆ, ಒತ್ತಡದ ದರವನ್ನು ಸಂಜೆ ೬ ಗಂಟೆಯಿಂದ ೯ ಗಂಟೆಯವರೆಗೆ ಅಗ್ರಿಮೆಂಟ್ ಪ್ರಕಾರ ಯೂನಿಟ್ ಒಂದಕ್ಕೆ ೨೮ಪೈಸೆ ಪ್ರಕಾರ ಸ್ವಲ್ಪ ಹೆಚ್ಚು ಕಡಿಮೆ ೫೬ ಲಕ್ಷ ರೂಪಾಯಿ ಕೊಡುವುದಕ್ಕೆ ಒಪ್ಪಿದ್ದಾರೆ. ಇದರಿಂದ ಕರ್ನಾಟಕಕ್ಕೆ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿದೆ. It is almost in the state of confusion. ಇವತ್ತು ಒಂದು ಸಾವಿರ ಮಿಲಿಯನ್ ಯೂನಿಟ್‌ಗೆ ೨೩ ಪೈಸೆಯಂತೆ ಕೊಡುವುದಕ್ಕೆ ಒಪ್ಪಿಲ್ಲ. ಒಂದು ಹೆಜ್ಜೆ ಮುಂದೆ ಹೋಗಿ ೨೮ ಪೈಸೆಯಂತೆ ಕೊಡುತ್ತೇವೆ ಎಂದು ಒಪ್ಪಿಕೊeಡಿದ್ದಾರೆ. ಪೀಕ್ ಲೋಡೆಡ್ ಅವರ್‌ಗೆ ೫೬ ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಮತ್ತು ಗ್ರಾಹಕರಿಗೆ ತೊಂದರೆಯಾಗಿದೆ. ಒಂದು ವರ್ಷಕ್ಕೆ ಒಪ್ಪಿಕೊಂಡು, ೨ ವರ್ಷ ಬಿಟ್ಟರು, ಈ ವಿಚಾರದಲ್ಲಿ ಸರ್ಕಾರದ ಹೇಳಿಕೆಯನ್ನು ನಿರೀಕ್ಷೆ ಮಾಡುತ್ತೇನೆ.

SRI R. GUNDU RAO (Chief Minister).— In connection with the supply of energy from Kerala to Karnataka, discussions were first held between the two Governments on 27th February 1979. These discussions were not reduced to the

form of an agreement. The understanding reached provided for the supply of 1000 million units per annum of energy from Kerala to Karnataka for which Karnataka was to pay energy charges at 16 paise plus 2 paise (excise duty) for the first 50% of power supply and 26 paise plus 2 paise (excise duty) for the balance, ex-Karnataka border. These arrangements were to continue till 11th February 1983, but Kerala and Karnataka were free to seek a review for revision in the price w.e.f. 12th February 1982.

Subsequently, with a view to getting larger supplies of energy from Kerala there were fresh discussions between the Chief Minister of Karnataka and Minister for Electricity, Kerala on 3rd April 1980. The resultant agreement provided for the continuance of the rates mentioned above upto a supply of 1000 million units per year However, if the quantity supplied exceeded 1000 million units, this additional quantity of energy had to be paid at the rates of 28 paise (inclusive of excise duty, ex-Idukki. This agreement was valid till 30th June 1980.

During the early part of January 1981, it was found that the supply of energy from Kerala had gone down substantially. A number of requests were sent to Kerala to step up this supply in accordance with the provisions of the Agreement. However, the position did not improve.

Meanwhile, a press statement issued by the authorities in Kerala appeared in some newspapers to the effect that Karnataka owed substantial sums to Kerala. Our Government immediately clarified to the Kerala authorities that the figure mentioned in the press reports was incorrect and that but for some outstanding differences of views on issues like wheeling charges for supply of energy to Tamil Nadu, peakload charges, erroneous meter readings etc., all other payments were made. At any rate, the amount outstanding was far less than what had appeared in the papers. This was followed by sending a team of officers from Karnataka Electricity Board to Trivandrum to further clarify the position. This team pointed out to Kerala authorities the details such as cheque numbers, dates etc., on which payments had already been made.

Thereafter, the Finance Minister and Minister of State for Power, Karnataka visited Trivandrum on 13th January 1981 to clarify the position further and ensure steady supply of energy to our State. As a result of these discussions, the authorities of Kerala were convinced that except for the outstanding differences of views on issues mentioned above all other demands raised by Kerala had been settled. It was found that certain remittances made by us had

not been taken into account by the Government of Kerala for want of Bank intimation. On our pointing out this position, the Minister for Power, Kerala, promptly issued a press statement saying that all the outstanding payments had been settled and that the said issues on which there were differences of views would be sorted out by technical officers of the two Governments.

Further, with regard to the supply of energy from Kerala to our State, Government of Kerala were very particular that the existing rates were very unremunerative to them. They also felt that because of continued escalation in costs and increasing local needs, any long-term agreement was not feasible. They clearly mentioned that they would not be in a position to make any further supplies unless the rates were revised. Our Government argued that in view of the existing understanding it would not be appropriate to abrogate the same and enter into any fresh agreement. As Government of Kerala was firm that no further supplies would be made unless the rates were enhanced to the same level as what Tamil Nadu was paying (*viz.* 28 paise per unit, ex-Idukki) a fresh agreement was entered into by our Government with Kerala on 14th January 1981. At this juncture our Government considered very carefully the relative merits and demerits of agreeing to pay the higher amount as demanded by Kerala and ensuring supply of energy. The alternative was to forego all energy supplies from Kerala hereafter. Not only would thousands of persons be consequently thrown out of employment but the industrial production within the State would slump alarmingly for want of electricity. Viewed in this context, the higher energy charges were considered worth-while. Further, the industrial units in our State voluntarily indicated that they were prepared to pay higher electricity charges. They requested the Government, that, at any cost, we should ensure a regular flow of energy supply from Kerala. Considering all these factors, Government decided in the interest of the State to agree to pay higher charges of 28 paise ex-Idukki for the energy supplied by Kerala. This agreement is valid for one year from 14th January 1981. Kerala Government had agreed to supply the maximum possible energy along the direct Idukki-Mysore line after meeting its own internal requirements. Such supply will not ordinarily be less than 2.25 millions unit a day. No yearly quantum for supply has been fixed.

ಶ್ರೀ ಎಸ್.ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಕೇರಳ ರಾಜ್ಯದವರು ನಮ್ಮ ರಾಜ್ಯಕ್ಕೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಆದ ಒಪ್ಪಂದದ ಬಗ್ಗೆ ಕಳೆದ ಸಲವೂ ಇಲ್ಲಿ ದೀರ್ಘವಾಗಿ ಚರ್ಚೆ ಮಾಡಿದ್ದೇವೆ. ಆಗ ಚರ್ಚೆ ಮಾಡುವಾಗ ತಾ॥ ೨೭-೨ ೧೯೭೯ರಲ್ಲಿ ಆ ರಾಜ್ಯದ ಜೊತೆಯಲ್ಲಿ ಯಾವ ಒಪ್ಪಂದವೂ ಆಗಿರಲಿಲ್ಲ ಎನ್ನುವ ಮಾತಿನ ಬಗ್ಗೆಯೂ ಕಳೆದ ಸಲ ಚರ್ಚೆ ನಡೆಯಿತು. ಈ ಚರ್ಚೆಯು

ವಿವರಗಳು ಡಿಬೇಟ್‌ನಲ್ಲಿದೆ. ಆಗ ಶ್ರೀ ಶ್ರೀನಿವಾಸ್ ಅವರು ಮಂತ್ರಿಗಳಾಗಿದ್ದರು. ಆಗಿನ ಮುಖ್ಯ ಮಂತ್ರಿಗಳೂ ಸಹ ಇದೇ ರೀತಿಯ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಮತ್ತೆ ಈಗ ಶ್ರೀಮಾನ್ಯ ಗುಂಡೂರಾವ್ ಅವರು ಮುಖ್ಯಮಂತ್ರಿಗಳಾದ ಮೇಲೆ ಇವರ ಬಗ್ಗೆ ಹೊಸ ಒಪ್ಪಂದ ಮಾಡಿಕೊಳ್ಳುವಂತೆ ಅವರು ಒತ್ತಾಯ ಮಾಡಿದರು ಎನ್ನುವ ಮಾತನ್ನು ಈಗ ಹೇಳಿದ್ದಾರೆ. ೧೯೭೯ರಲ್ಲಿ ಕೇರಳ ಮತ್ತು ಕರ್ನಾಟಕ ಸರ್ಕಾರಗಳ ನಡುವೆ ಒಂದು ಒಪ್ಪಂದವಾದ ಮೇಲೆ ಅದು ೧೯೮೩ರವರೆಗೆ ಚಾರಿಯಲ್ಲಿರಬೇಕಾಗಿತ್ತು. ಆದರೆ ಅದಕ್ಕೂ ಮೊದಲೇ ಒಂದು ಹೊಸ ಒಪ್ಪಂದ ಮಾಡಿಕೊಳ್ಳಲು ಕಾರಣ ವೇನಿತ್ತು ? ಅವರು ಈ ಬಗ್ಗೆ ಹಠ ಮಾಡಿದ ಕಾರಣ ಈ ರೀತಿ ಮಾಡಬೇಕಾಯಿತೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ರಾಜ್ಯ ರಾಜ್ಯಗಳ ನಡುವೆ ಆದಂಥ ಒಪ್ಪಂದವನ್ನು ಒಂದು ಒಳ್ಳೆಯ ಪರಂಪರೆ ದೃಷ್ಟಿಯಿಂದ ಹಾಗೂ ಕಾನೂನು ಪ್ರಕಾರ ಅವರು ೧೯೮೩ರವರೆಗೆ ಮುಂದುವರೆಸಬೇಕಾಗಿತ್ತು. ಇದಕ್ಕೆ ಅವರು ಮಧ್ಯದಲ್ಲಿ ಒಪ್ಪದಿದ್ದಾಗ ತಾವು ಕೇಂದ್ರದ ಮೇಲೆ ತಮ್ಮ ಒಂದು ಪ್ರಭಾವವನ್ನು ಬೀರಿ ಈ ಒಪ್ಪಂದ ಮುಂದುವರಿಯುವಂತೆ ಏತಕ್ಕೆ ಕ್ರಮ ಕೈಗೊಳ್ಳಲಿಲ್ಲ ? ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ತಮಗೆ ಏನಾದರೂ ಆತಂಕ ಇತ್ತೇ ? ಮತ್ತು ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದರೆ ಈ ರಾಜ್ಯಕ್ಕೆ ಏನಾದರೂ ತೊಂದರೆಯಾಗುತ್ತಿತ್ತೇ ಎಂಬುದನ್ನು ತಾವು ತಿಳಿಸಬೇಕು.

ಇಲ್ಲಿ ಮತ್ತೊಂದು ಆಶ್ಚರ್ಯದ ಸಂಗತಿಯುಂದರೆ, ನಮ್ಮ ಆರ್ಥಿಕ ಮಂತ್ರಿಗಳು ಬಹಳ ಬುದ್ಧಿವಂತರಿದ್ದಾರೆ ಮತ್ತು ಬಹಳ ಚುರುಕಾಗಿದ್ದಾರೆ. ಆದರೂ ಸಹ ಕೇರಳ ಸರ್ಕಾರದವರು ನಮ್ಮ ರಾಜ್ಯದಿಂದ ವಿದ್ಯುತ್ ಬಾಕಿ ೭ ಕೋಟಿ ರೂಪಾಯಿಗಳಿಷ್ಟಿದೆ ಎಂದು ಹೇಳಿಕೆ ಕೊಟ್ಟಾಗ, ಮಾನ್ಯ ಆರ್ಥಿಕ ಮಂತ್ರಿಗಳು ನಾನಾ ರೀತಿಯ ಹೇಳಿಕೆಗಳನ್ನು ಈ ಬಗ್ಗೆ ಕೊಡಲು ಕಾರಣವೇನು ? ಮೊದಲು ಎರಡು ಲಕ್ಷ ರೂಪಾಯಿಗಳು ಮಾತ್ರ ಬಾಕಿ ಇದೆ ಎಂದರು, ನಂತರ ೭ ಲಕ್ಷ ರೂಪಾಯಿಗಳು ಬಾಕಿ ಎಂದರು, ಆನಂತರ ೭೦ ಲಕ್ಷ ರೂಪಾಯಿಗಳು ಬಾಕಿ ಎಂದು ಹೇಳಿದರು. ಕೇರಳ ಸರ್ಕಾರಕ್ಕೆ ನಮ್ಮ ಸರ್ಕಾರ ಏನಾದರೂ ಬಾಕಿ ಕೊಡುವುದಿದ್ದರೆ ಮಾನ್ಯ ಆರ್ಥ ಮಂತ್ರಿಗಳು ಹೇಳಿಕೆ ಕೊಡುವುದಕ್ಕೆ ಮುಂಚೆ ತಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಸರಿಯಾದ ಹೇಳಿಕೆ ಕೊಡಬಹುದಾಗಿತ್ತು. ಆದರೆ ಆತುರವಾಗಿ ಇಂತಹ ಹೇಳಿಕೆಗಳನ್ನು ಕೊಡುವುದರ ಅಗತ್ಯ ಏನಿತ್ತು ? ಇದು ಅವರ ಒಂದು ಬೇಜವಾಬ್ದಾರಿ ಹೇಳಿಕೆ ಎಂದು ಹೇಳುವುದಕ್ಕೆ ಬಯಸುವುದಿಲ್ಲ, ಆದರೆ ಅವರು ಸರಿಯಾದ ಅಂಕೆ ಅಂಶಗಳನ್ನು ತಿಳಿದುಕೊಂಡು ಹೇಳಿಕೆ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು, ಒಟ್ಟಿನಲ್ಲಿ ನನ್ನ ಪ್ರಶ್ನೆಯಾದರೂ ಇಷ್ಟೆ, ಕೇರಳ ಸರ್ಕಾರಕ್ಕೆ ಬಾಕಿ ಹಣ ಕೊಡುವುದು ಏನಾದರೂ ಇದೆಯೇ ? ಇದ್ದರೆ ಎಷ್ಟು ? ಅವರು ಹೊಸ ಒಪ್ಪಂದವಾಗ ಬೇಕೆಂದು ಹೇಳಿದಾಗ ಕಾನೂನು ಪ್ರಕಾರ ನಮ್ಮ ಸರ್ಕಾರ ಏತಕ್ಕೆ ಕ್ರಮ ಕೈಗೊಳ್ಳಲಿಲ್ಲ ? ಮತ್ತು ಆ ಸರ್ಕಾರದವರು ಒಪ್ಪಂದದ ಪ್ರಕಾರ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ತಾವು ಕೇಂದ್ರದ ಮೇಲೆ ಒತ್ತಡ ಏತಕ್ಕೆ ತರಲಿಲ್ಲ ? ಈಗ ಹೊಸ ಒಪ್ಪಂದ ಮಾಡಿಕೊಂಡ ಮೇಲೆ ಎಷ್ಟು ಹೆಚ್ಚು ಹಣ ಕೊಡಬೇಕಾಗುತ್ತದೆಂಬುದನ್ನು ತಾವು ತಿಳಿಸಬೇಕು.

† ಶ್ರೀ ಕೆ.ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಹೇಳಿಕೆಯನ್ನು ನಾನು ಓದಿ ನೋಡಿದೆ. ಇದರಲ್ಲಿರುವ ಒಂದೇ ಒಂದು ವಾಕ್ಯವನ್ನು ಅರ್ಥಮಾಡಿಕೊಂಡರೆ, ನಾವು ಆ ರಾಜ್ಯದ ಜೊತೆಯಲ್ಲಿ ಮಾಡಿಕೊಂಡ ಒಪ್ಪಂದವು ಈ ರೀತಿ ಪರ್ಯವಸನವಾಗುವುದಕ್ಕೆ ಕಾರಣ, ನನ್ನ ದೃಷ್ಟಿಯಲ್ಲಿ ಹೇಳಬೇಕೆಂದರೆ, ೧೯೭೯ರಲ್ಲಿ ನಾವು ಅವರ ಜೊತೆಯಲ್ಲಿ ಏನು ಒಪ್ಪಂದ ಮಾಡಿಕೊಂಡಿದ್ದೆವು, ಅದರಲ್ಲಿ it had not been reduced in the form of an agreement ಎಂದು ಹೇಳಿದೆ. ಹಿಂದಿನ ಸಲ ಇದೇ ವಿಚಾರ ಇಲ್ಲಿ ಚರ್ಚೆಗೆ ಬಂದಾಗ ಮಾನ್ಯ ಆರ್ಥ ಮಂತ್ರಿಗಳು ಕೇರಳ ರಾಜ್ಯದ ಜೊತೆ ಈ ಬಗ್ಗೆ ಒಪ್ಪಂದವಾಗಿರಲಿಲ್ಲ, ಸುಮ್ಮನೆ ಪ್ರಾತುಕತೆಯಾಗಿತ್ತು ಎಂದು ಹೇಳಿದರು, ಮರುದಿವಸ ನಾನು ಈ ಬಗ್ಗೆ ಮತ್ತೆ ಪ್ರಶ್ನೆ ಮಾಡುವುದಕ್ಕೆ ಮುಂಚೆ ೧೯೭೯ರ ಅಗ್ರಿಮೆಂಟ್ ಆದಾಗ ಆ ರಾಜ್ಯದಲ್ಲಿ ಯಾವ ಲೋಕೋಪಯೋಗಿ ಕಮೀಷನರ್ ಅವರು ಇದ್ದರೋ, ಅವರೇ ಆ ಹುದ್ದೆಯಲ್ಲಿ ಮುಂದುವರೆದಿದ್ದ ಕಾರಣ, ಅವರಿಗೆ ಫೋನ್ ಮಾಡಿ ಕೇಳಿದೆ ಅವರು ಹೇಳಿದರು it was an agreement ಎಂದು. ಯಾವತ್ತೂ ಕೂಡ ಆ ಅಗ್ರಿಮೆಂಟ್ ಇಲ್ಲವೆಂದು ಇಲ್ಲಿ ಹೇಳಿದ ಮೇಲೆ ನಾನು ಮಾನ್ಯ ಆರ್ಥ ಮಂತ್ರಿಯವರನ್ನು ಕೇಳಿದೆ. ಇಗರತಕ್ಕಂಥ ಅಗ್ರಿಮೆಂಟ್ ಅದು ಅಗ್ರಿಮೆಂಟ್ ಅಲ್ಲವೇ ಅಲ್ಲವೆಂದು ಹೇಳುವುದಾದರೆ, ನಾನು ಈ ಸದನವನ್ನು ಬಿಟ್ಟು ಹೋಗುತ್ತೇನೆಂದು ಹೇಳಿದೆ. ಅವರು ಈ ಬಗ್ಗೆ ಏನೇನೋ ಹೇಳಿದರು. ಈ ಬಗ್ಗೆ ಹಿಂದೆಯೇ ಅಗ್ರಿಮೆಂಟ್

ಆಗಿದೆ. Then I also cautioned him one thing. It is not a question of personal challenge or whatsoever. You must understand the nuances of inter-State arrangements and agreement. If you yourself plead that there was not any agreement, then you will get into trouble. ಎಂದು ನಾನು ಅವತ್ತೇ ಅವರಿಗೆ ಹೇಳಿದೆ. ಅವರು ಅವರ ಪ್ರೊಜಿಷನ್ ಅನ್ನು ಒಂದು ರೀತಿಯಲ್ಲಿ ಪ್ರೂವ್ ಮಾಡುತ್ತಾ ಬಂದರು. ಈ ಪರಿಸ್ಥಿತಿ ಏತಕ್ಕೆ ಬಂತು ? ನಾನು ಆರ್ಥಮಾಡಿಕೊಂಡ ಪ್ರಕಾರ ತಾವು ಇಲ್ಲಿ ೧೦೦ ಪರ್ಸೆಂಟ್ ಪವರ್‌ಕಟ್ ಘೋಷಣೆ ಮಾಡಿ ಅಧಿಕಾರ ವಹಿಸಿಕೊಂಡ ಅವಧಿಯಲ್ಲಿ ಕೇರಳಕ್ಕೆ ಹೋದಾಗ ಈ ರೀತಿ ಒಂದು ಅಗ್ರಿಮೆಂಟ್ ಇತ್ತು, ಇದರ ಕಂಡಿಷನ್ಸ್ ಈ ರೀತಿ ಇದೆ ಎನ್ನುವ ತಿಳಿವಳಿಕೆ ನಿಮಗಿರಲಿಲ್ಲ. ಏಕೆಂದರೆ, ನಿಮ್ಮ ಅಧಿಕಾರಿಗಳು ಯಾರೂ ಈ ರೀತಿ ಅಗ್ರಿಮೆಂಟ್ ಇದೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಲ್ಲ. ಈ ವಿಚಾರವನ್ನು ಅಧಿಕಾರಿಗಳು ತಮ್ಮ ಗಮನಕ್ಕೆ ತರದೇ ಇದ್ದುದರಿಂದ ತಾವು ಯಾವುದೇ ಅಗ್ರಿಮೆಂಟ್ ಇಲ್ಲವೆಂದು ತಿಳಿದುಕೊಂಡು ಕೇರಳದಲ್ಲಿ ಮಾತನಾಡಿದ್ದರಿಂದಾಗಿ ಅವರು ಈ ವಿಷಯವನ್ನು ಲಾಭದಾಯಕವಾಗಿ ಮಾಡಿಕೊಳ್ಳುವುದಕ್ಕೆ ಅವಕಾಶವಾಯಿತು. ಅವತ್ತೇ ಬಹಳ ಜವಾಬ್ದಾರಿಯಿಂದ ಈ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದ್ದಿದ್ದರೆ ಇದಕ್ಕೆಲ್ಲಾ ಅವಕಾಶವಾಗುತ್ತಿರಲಿಲ್ಲ.ಕೇರಳದ ಎಲೆಕ್ಟ್ರಿಸಿಟಿ ಮಿನಿಸ್ಟರ್‌ರವರು ಅಲ್ಲಿನ ಅಸೆಂಬ್ಲಿಯಲ್ಲಿ An agreement has been reached with Karnataka ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರೇ ಆ ವಿಷಯವನ್ನು ಹೇಳಿರಬೇಕಾದರೆ ಅದನ್ನು ಗಮನಕ್ಕೆ ತೆಗೆದುಕೊಳ್ಳದೇ, ಈ ಬಗ್ಗೆ ಯಾವುದೇ ಅಗ್ರಿಮೆಂಟ್ ಇಲ್ಲವೆಂದು ತಿಳಿದುಕೊಂಡು ಹೋದರೆ ಯಾವುದೇ ರಾಜ್ಯದವರಾದರೂ ಅವರಿಗೆ ಲಾಭದಾಯಕವಾಗಿ ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡೇ ಉಪಯೋಗಿಸಿಕೊಳ್ಳುತ್ತಾರೆ. ಆದ್ದರಿಂದ ಈ ಹಂತದಲ್ಲಿ ಯಾವ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿತ್ತೋ ಅದನ್ನು ನಿರ್ವಹಿಸದೇ ಅಗ್ರಿಮೆಂಟ್ ಇಲ್ಲವೆಂದು ತಿಳಿದುಕೊಂಡು ಕೇರಳದವರ ಜೊತೆಯಲ್ಲಿ ವ್ಯವಹರಿಸಿದ್ದರಿಂದ ಈ ಒಂದು ಪರಿಸ್ಥಿತಿ ಪ್ರಾಪ್ತವಾಯಿತು ಎಂದು ಸ್ಪಷ್ಟವಾದ ಆಪಾದನೆಯನ್ನು ನಾನು ಈ ಸರ್ಕಾರದ ಮೇಲೆ ಮಾಡುವುದಕ್ಕೆ ಬಯಸುತ್ತಿದ್ದೇನೆ. ಏಕೆಂದರೆ, ನಾವು ಈ ಹಿಂದೆಯೇ ಬಹಳ ಶ್ರಮಪಟ್ಟು ಅಗ್ರಿಮೆಂಟ್ ಮಾಡಿದ್ದೆವು. ತಮಿಳುನಾಡು ಸರ್ಕಾರದವರ ಕೈಯಿಂದ ತಪ್ಪಿಸಿಕೊಂಡಿದ್ದೆವು. In a way we checkmated Tamil Nadu and got this bilatreal agreement from Kerala. ಇದು ಇನ್ನೂ ೪ ವರ್ಷ ಸರಿಯಾಗಿ ನಡೆದಿದ್ದರೆ ನಮ್ಮ ರಾಜ್ಯದ ವಿದ್ಯುಚ್ಛಕ್ತಿ ಪರಿಸ್ಥಿತಿಯನ್ನು ಗಣನೀಯ ರೀತಿಯಲ್ಲಿ ನಿರ್ವಹಿಸುವುದಕ್ಕೆ ಸಾಧ್ಯವಿತ್ತು. ಈ ಅಗ್ರಿಮೆಂಟ್ ಇಲ್ಲವೆಂದು ತಿಳಿದುಕೊಂಡು ಕೇರಳದವರ ಜೊತೆಯಲ್ಲಿ ವ್ಯವಹಾರ ಮಾಡಿದ್ದರಿಂದ ಇದ್ದಕ್ಕಿದ್ದಂತೆ ನಾವೇ ಕೇರಳದವರ ಕೈಯಲ್ಲಿ ಅಸ್ತ್ರವನ್ನು ಕೊಟ್ಟು ಶಾಸ್ತ್ರ ಮಾಡಿಸಿಕೊಂಡಂತಾಗಿದೆ. ಈ ಹಂತದಲ್ಲಿ ಇದಕ್ಕೆ ಯಾವ ಪರಿಹಾರವೂ ಇಲ್ಲ. ನಾನು ಈ ಬಗ್ಗೆ ಬಹಳ ತೀವ್ರವಾಗಿ ವಿಷಾದಿಸುವುದು ಏನೆಂದರೆ, ಈ ವಿಚಾರದಲ್ಲಿ ಹಿಂದಿನ ಸರ್ಕಾರದವರು ಮಾಡಿದ್ದಂಥ ಒಳ್ಳೆಯ ಕೆಲಸ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡಿದ್ದರೆ ಈ ಪರಿಸ್ಥಿತಿ ಬರುತ್ತಾ ಇರಲಿಲ್ಲ ಎಂದು ನಾನು ಸ್ಪಷ್ಟಪಡಿಸಬೇಕಾಗಿದೆ. ಆ ಅಗ್ರಿಮೆಂಟ್ ಇಲ್ಲ ಎಂಬ ಭಾವನೆಯಿಂದ ಅಲ್ಲಿಗೆ ಹೋಗಿ ವ್ಯವಹಾರ ಮಾಡಿದ್ದರಿಂದ ಇವತ್ತು ಅಪಾರವಾದ ಹಾನಿ ನಮ್ಮ ರಾಜ್ಯಕ್ಕೆ ಉಂಟಾಯಿತು. ಆ ಅಗ್ರಿಮೆಂಟ್ ಪ್ರಕಾರ ೧೦೦ ಮಿಲಿಯನ್ ಯೂನಿಟ್ಸ್‌ನ್ನು ಅವರು ನಮಗೆ ಕಡ್ಡಾಯವಾಗಿ ಕೊಡಬೇಕಾಗಿತ್ತು. ಅದು ಇವತ್ತು ತಪ್ಪಿಹೋಯಿತು. ನಾವು ಹಿಂದೆ ೨೩ ಪೈಸೆಯನ್ನು ಒಂದು ಯೂನಿಟ್‌ಗೆ ಕೊಡುತ್ತಿದ್ದೆವು. ಈಗ ಇದರಲ್ಲಿ ಹೈಕ್ಲಾಸ್ ಪವರ್ ಮತ್ತು ಲೋ ಕ್ಲಾಸ್ ಪವರ್ ಎಂದು ಮಾಡಿಕೊಂಡಿರುವುದರಿಂದ ಇವತ್ತು ೨೮ ಪೈಸೆಯಾಗಿದೆ. Even the quantum is not assured and for what benefit all this was done? As the Chief Minister stated his effort was to get more power from Kerala. Instead we have landed in this most unenviable position. ಹಿಂದೆ ಇದ್ದಂಥ ಅಗ್ರಿಮೆಂಟನ್ನು ಕಳೆದುಕೊಂಡದ್ದರಿಂದ ಕೇರಳದಿಂದ ಬರುವಂಥ ಸ್ವಲ್ಪ ಪವರ್‌ಗೆ ಜಾಸ್ತಿ ರೇಟ್ ಕೊಡತಕ್ಕಂಥ ಪರಿಸ್ಥಿತಿ ಉಂಟಾಯಿತು. ಈ ಪರಿಸ್ಥಿತಿ ಏತಕ್ಕೆ ಉಂಟಾಯಿತು ಎಂಬುದಕ್ಕೆ ಮೂಲ ಕಾರಣವೆಂದರೆ, ಆ ಅಗ್ರಿಮೆಂಟ್ ಇಲ್ಲವೆಂದು ತಿಳಿದುಕೊಂಡು ಕೇರಳದವರ ಜೊತೆ ವ್ಯವಹಾರ ಮಾಡಿದ್ದು ಆ ಅಗ್ರಿಮೆಂಟ್ ಇದೆ ಎಂದು ಅವರೇ ಒಪ್ಪಿಕೊಂಡಿದ್ದರೂ ಕೂಡ ನಾವೇ ಆ ರೀತಿ ಅಗ್ರಿಮೆಂಟ್ ಇಲ್ಲವೆಂದು ಹೇಳಿ, ಅಲ್ಲಿಗೆ ಹೋಗಿ ವ್ಯವಹಾರ ಮಾಡಿದ್ದರಿಂದ ಈ ಪರಿಸ್ಥಿತಿ ಉಂಟಾಯಿತು ಎಂದು ನಾನು ಈ ಸಂದರ್ಭದಲ್ಲಿ ಮತ್ತೊಮ್ಮೆ ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ.

† ಶ್ರೀ ಎಂ.ಸಿ. ಬಸಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರದಲ್ಲಿ ಒಂದು ಹೇಳಿಕೆಯನ್ನು ಇಲ್ಲಿ ಮಾಡಿದ್ದಾರೆ ಇದರಲ್ಲಿ ನಾನು ಎರಡು ವಿಚಾರದ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕೆಂದಿದ್ದೇನೆ. ಅವರ ಹೇಳಿಕೆಯ ಮೊದಲನೆಯ ಪ್ಯಾರಾದಲ್ಲಿ It was a form of agreement ಎಂದು ಹೇಳಿದ್ದಾರೆ. ಕೊನೆಯಲ್ಲಿ ಏನು ಹೇಳಿದ್ದಾರೆ ಎಂದರೆ, These agreements were to continue till 11-12-1983. But Kerala and Karnataka were free to seek a review of revision in the revision after 12-2-1981 ಎಂದು ಹೇಳಿದ್ದಾರೆ. ಅವರು ಏನು ಈ ಬಗ್ಗೆ ನೆಗೋಷಿಯೇಟ್ ಮಾಡುವುದಕ್ಕೆ ಕೇರಳಕ್ಕೆ ಹೋದರೋ ಆಗ ಆದಂಥ ಅಗ್ರಿಮೆಂಟ್ ಬಗ್ಗೆ ಇಲ್ಲಿ ಪ್ರಸ್ತಾಪ ಬರಲಿಲ್ಲ, ಹಿಂದಿನ ಅಗ್ರಿಮೆಂಟ್ ಪ್ರಕಾರ 1982ರ ತನಕ ವಾಯಿದೆ ಇರುವುದರಿಂದ the Rate revision is not contemplated. So, we cannot re-open the question of revision of rates. ಆದ್ದರಿಂದ ನಮ್ಮ ಸರ್ಕಾರದವರು ೧೨-೨-೧೯೮೧ರ ನಂತರ ರೇಟ್ ರಿವಿಷನ್ ಮಾಡತಕ್ಕಂಥ ವಿಚಾರವನ್ನು ಕೇರಳ ಸರ್ಕಾರದವರ ಮುಂದೆ ಏತಕ್ಕೆ ಇಟ್ಟರು ? ಮತ್ತು ಪೀಕ್‌ಲೋಡ್ ಚಾರ್ಜಸ್ ಎಂದು ಏನು ೫೬ ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ ಅದರ ಬಗ್ಗೆ ಅಗ್ರಿಮೆಂಟ್ ಇದೆಯೇ ? ಹಾಗಿಲ್ಲದಿದ್ದರೆ, ಇಲ್ಲದೇ ಇರುವುದಕ್ಕೆ ಸರ್ಕಾರದವರು ಏತಕ್ಕೆ ಒಪ್ಪಿಗೆ ಕೊಟ್ಟು ಬಂದರು ಏನ್ನುವುದಕ್ಕೆ ಕ್ಲಾರಿಫಿಕೇಷನ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಮಾನ್ಯ ಮಾಜಿ ವಿದ್ಯುಚ್ಛಕ್ತಿ ಮಂತ್ರಿಯವರು ಬಹಳ ಬುದ್ಧಿವಂತ ತನವನ್ನು ತೋರಿಸಿ, ನಾವು ಮಾಡಿದಂಥ ಅಗ್ರಿಮೆಂಟ್ ಒಳ್ಳೆಯದಿತ್ತು, ಇದರ ಬಗ್ಗೆ ಈಗಿನವರಿಗೆ ತಿಳಿವಳಿಕೆ ಇಲ್ಲದೇ ಅಧಿಕಾರಕ್ಕೆ ಬಂದ ಹೊಸದರಲ್ಲಿ ಆತುರದಲ್ಲಿ ಕೇರಳದವರೊಡನೆ ವ್ಯವಹಾರ ಮಾಡುವುದಕ್ಕೆ ಹೋದರು, ಇದರಿಂದ ಈ ಪರಿಸ್ಥಿತಿ ಆಯಿತು ಎಂದು ಹೇಳಿದರು. ನಾನು ಒಂದು ಮಾತು ಹೇಳುವುದಾದರೆ, ನಮಗೆ ಅವರಿಗಿಂತ ಜಾಸ್ತಿ ಬುದ್ಧಿ ಇಲ್ಲದೇ ಹೋದರೂ ಅವರಿಗಿಂತ ಕಡಿಮೆ ಬುದ್ಧಿ ಏನೂ ಇಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾವು ಹಿಂದೆ ೫೫ ಪರ್ಸೆಂಟ್ ಪವರ್‌ಕಟ್ ಮಾಡಿದ್ದೆವು. ನೀವು ೧೦೦ ಪರ್ಸೆಂಟ್ ಕಟ್ ಮಾಡಿದ್ದೀರಿ ಏತಕ್ಕೆ ?

ಶ್ರೀ ಆರ್. ಗುಂಡೂರಾವ್.—ಆ ವಿಚಾರ ಎಲ್ಲರಿಗೂ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ಅವರು ಪವರ್ ಕೊಡುವುದಿಲ್ಲ ಎಂದಾಗ ಈ ವಿಚಾರವನ್ನು ನಾವು ಕೋರ್ಟಿಗೆ ತೆಗೆದುಕೊಂಡು ಹೋಗಿ ಕೇಳತಕ್ಕಂಥ ಪರಿಸ್ಥಿತಿ ಇರಲಿಲ್ಲ. ಏಕೆಂದರೆ, ಈ ಬಗ್ಗೆ ಅಗ್ರಿಮೆಂಟ್ ನಮಗೂ ಅವರಿಗೂ ಇರಲಿಲ್ಲ. There is no clause. It was only an understanding. ಇವತ್ತು ನಾವು ನಮಗೆ ವಿದ್ಯುಚ್ಛಕ್ತಿ ಕಡಿಮೆ ಇದೆ, ಕೊಡಿ ಎಂದು ಕೇಳುವ ಪರಿಸ್ಥಿತಿಯಲ್ಲಿದ್ದೇವೆ, ಅವರು ಅದನ್ನು ಕೊಡಬೇಕು. ಮಾನ್ಯ ಸದಸ್ಯರು ಮಾತನಾಡತಕ್ಕಂಥ ಕಾಲದಲ್ಲಿ ಹಿಂದಿನ ಅಗ್ರಿಮೆಂಟ್ ಪ್ರಕಾರ ಏತಕ್ಕೆ ಕೇಳಲಿಲ್ಲ ಎಂದು ಹೇಳಿದರು. ನಾನು ಮೊದಲೇ ಹೇಳಿದಹಾಗೆ ಈ ಬಗ್ಗೆ ಅಗ್ರಿಮೆಂಟ್ ಇರಲಿಲ್ಲ, ಒಂದು ಅಂಡರ್‌ಸ್ಟ್ಯಾಂಡಿಂಗ್ ಇತ್ತು ಅಷ್ಟೆ. ಅವರು ಪವರ್ ಕೊಡುವುದಿಲ್ಲ ಎಂದು ಹೇಳಿದಾಗ ನಾವು ಕೋರ್ಟಿಗೆ ಹೋಗುವ ಪರಿಸ್ಥಿತಿಯಲ್ಲೂ ಇರಲಿಲ್ಲ. ಮಾನ್ಯ ಸದಸ್ಯರು ಈ ಬಗೆ ಸರ್ಕಾರದವರು ರಾಜ್ಯದ ಇಂಟರೆಸ್ಟನ್ನು ಬಿಟ್ಟುಕೊಟ್ಟಿದ್ದಾರೆ ಎಂದು ಹೇಳಿದರು. ಈ ರಾಜ್ಯದ ಇಂಟರೆಸ್ಟನ್ನು ಬಿಟ್ಟು ಕೊಡುವುದಕ್ಕೆ ನಾವೇನು ಚಿಕ್ಕ ಮಕ್ಕಳೇ ! ಇದರಲ್ಲಿ ಅವರಿಗಿಂತ ಜಾಸ್ತಿ ಇಂಟರೆಸ್ಟ್ ನಮಗೆ ಇದೆ. ಅದಕ್ಕೋಸ್ಕರ ಕೆಲಸ ಮಾಡುತ್ತಿದ್ದೇವೆ, ನಾವು ಹಿಂದೆ ಇದೇ ರೀತಿ ಆರ್ಡ್ಯೂ ಮಾಡಿದಾಗ ಅವರು ಇದೇ ರೀತಿಯ ಕಾರಣಗಳನ್ನು ನಮ್ಮ ಮುಂದಿಟ್ಟಿದ್ದರು. ಮಾನ್ಯ ಶ್ರೀನಿವಾಸ್ ಅವರು ಒಂದು ಮಾತನ್ನು ತಿಳಿದುಕೊಳ್ಳಬೇಕು, ರಾಜ್ಯದ ಹಿತವನ್ನು ಇಟ್ಟುಕೊಂಡೇ ನಾವು ಕೇರಳದವರೊಡನೆ ವ್ಯವಹಾರ ಮಾಡಿದ್ದೇವೆ. ಖಿಜಾನೆಯಲ್ಲಿ ದುಡ್ಡು ಜಾಸ್ತಿಯಾಗಿದೆ ಅಂತ ಅಲ್ಲ. ಕೇರಳದವರು ಏನು ಹೇಳುತ್ತಾರೆ ಎಂದರೆ, It was not an agreement. It was a type of understanding and it was a type of agreement ಎಂದು ಹೇಳುತ್ತಾರೆ. ಅಲ್ಲದೇ ನೀವು ಯಾವ ಕೋರ್ಟಿಗೆ ಹೋಗುತ್ತೀರೋ ಹೋಗಿ ಎಂದು ವಾದ ಹೂಡಿದರು. ನಾವು ಸಮಾಧಾನದಲ್ಲಿ ವ್ಯವಹಾರ ಮಾಡಿದ್ದೇವೆ.

೩-೦೦ ಪಿ.ಎಂ.

ಈ ಮಧ್ಯೆ ತಮಿಳುನಾಡಿನವರು ಜಾಸ್ತಿ ಕೊಡುತ್ತೇವೆ ಕೊಡಿ ಎಂದು ಕೇಳುತ್ತಿದ್ದಾರೆ. ಮಾನ್ಯ ಬೊಮ್ಮಾಯಿಯವರು ಕೇಂದ್ರದ ಮೇಲೆ ಪ್ರಭಾವ ಬೀರಬೇಕು ಎಂದು ಹೇಳಿದರು. ಇದರಲ್ಲಿ ಪ್ರಭಾವ ಬೀರುವ ಪ್ರಶ್ನೆ ಇಲ್ಲ. ಈಗ ಕೇಂದ್ರ ಸರ್ಕಾರದವರು ರಾಷ್ಟ್ರೀಕರಣದ ಪ್ರಶ್ನೆಯನ್ನು ವಿಚಾರ ಮಾಡುತ್ತಿದ್ದಾರೆ. ಸ್ಟೇಟ್‌ನಿಂದ ಸ್ಟೇಟ್‌ಗೆ ಪವರ್ ಕೊಡತಕ್ಕಂಥಾದ್ದರ ಬಗ್ಗೆ ನ್ಯಾಷನಲೈಸೇಷನ್ ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದಾರೆ, ಆದುದರಿಂದ ಈ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೆ, ಹೈ ಕೋರ್ಟಿಗೆ, ಸುಪ್ರೀಂ ಕೋರ್ಟಿಗೆ ಹೋಗುವ ಪರಿಸ್ಥಿತಿಯಲ್ಲಿಲ್ಲ. ನಮಗೆ ಅರ್ಜೆಂಟ್ ಇದೆ, ಬಹಳ ತೊಂದರೆ ಇದೆ, ನಿಂತುಹೋಗಿರುವ ಪವರನ್ನು ಕೊಡಿ ಎಂದು ನಾವು ಕೇಳುವುದಷ್ಟೆ. ಇದನ್ನು ಅವರು ಮನಗಂಡು ಹಿಂದಿನ ಮಾತುಕತೆ ಪ್ರಕಾರ ೨೩ ಪೈಸೆಯಂತೆ ಕೊಡುತ್ತೇವೆಂದು ಹೇಳಿದರು. ಪರ್ ಯೂನಿಟ್ ೩೨ ಪೈಸೆ ಖರ್ಚಾಗುತ್ತದೆ. ನಮ್ಮಲ್ಲಿ ಬಹಳಷ್ಟು ಸಮಸ್ಯೆಗಳಿವೆ, ನಾವು ಹಣಕಾಸಿನ ತೊಂದರೆಯಲ್ಲಿದ್ದೇವೆ. ಇಷ್ಟು ಕೊಡುತ್ತೇವೆ ಕೊಡಿ ಎಂದು ನಾವು ಕೇಳಿದ್ದಕ್ಕೆ, ಅವರು ನೀವು ಇಷ್ಟು ಕೊಟ್ಟರೆ ಕೊಡುತ್ತೇವೆ, ನೀವು ಇಷ್ಟು ಕೊಡದೇ ಹೋದರೆ ಕೊಡುವುದಿಲ್ಲ ಎಂದು ಹೇಳಿದರು. ಒಂದು ರಾಜ್ಯದಿಂದ ವಿದ್ಯುಚ್ಛಕ್ತಿಯನ್ನು ತರಬೇಕಾದರೆ ಕೋರ್ಟಿಗೆ ಹೋಗುವುದಕ್ಕಾಗುತ್ತದೆಯೇ, ಸ್ಟೇ ಆರ್ಡರ್ ಕೊಡುತ್ತಾರೆಯೇ ಇಲ್ಲ. ಅವರು ಕರೆದಿರುವಂಥಾದ್ದು ಚರ್ಚೆ ಮಾಡುವುದಕ್ಕೆ. ಅದನ್ನು ಬಿಟ್ಟು ಟೆಕ್ನಿಕಲ್ ಆಗಿ, ಲೀಗಲ್ ಆಗಿ ಮಾಡುವುದಕ್ಕೆ ಸಾಧ್ಯವೇ. ಅಕಸ್ಮಾತ್ತಾಗಿ ಲೀಗಲ್ಲಾಗಿ ಕೇಳಿದರೂ ಸಹ, technically there are lot of ways to stop it ಅದನ್ನು ಹೇಳುವುದಕ್ಕೆ ಬರುವುದಿಲ್ಲ. ನಾವು ಪಾಧುರ ಸಂಬಂಧವಾಗಿ, ಪ್ರೀತಿಯಿಂದ ತೆಗೆದುಕೊಂಡು ಬಂದಿದ್ದೇವೆಯೇ ಹೊರತು ವಾದ ಹೂಡುವ ಸ್ಥಿತಿಯಲ್ಲಿ ಇರಲಿಲ್ಲ. Suppose this matter is in the hands of Centre, then we can prevail on them to direct the State of Kerala to release so much of power to the State. ಬೇಕಾದರೆ ನಾವು ಆರ್ಗ್ಯೂ ಮಾಡಬಹುದಿತ್ತು. ಆ ಪ್ರಶ್ನೆ ನಮ್ಮ ಹತ್ತಿರ ಇಲ್ಲ. ಅವರು ಒಪ್ಪಿಕೊಂಡರು, ಕೊಟ್ಟರು. ಮಾನ್ಯ ಬೊಮ್ಮಾಯಿಯವರು ಆರ್ಥ ಮಂತ್ರಿಗಳು ಹೀಗೀಗೆ ಹೇಳಿದ್ದಾರೆ ಎಂದು ಹೇಳಿದರು. ನಮಗೂ ಕನ್‌ಫ್ಯೂಸ್ ಆಯಿತು. ಕೇರಳದ ಮಂತ್ರಿಗಳು ೭ ಕೋಟಿ ರೂಪಾಯಿಗಳು ಬಾಕಿ ಇದೆ ಎಂದು ಹೇಳಿದರು. ಅವರು ಯಾವ ಆಧಾರದ ಮೇಲೆ ಹೇಳಿದ್ದಾರೊ. ನಾನು ಇರಲಿಲ್ಲ, ನಮ್ಮ ಅಶ್ವತ್ಥ ರೆಡ್ಡಿಯವರೂ ಇರಲಿಲ್ಲ. ಮಾನ್ಯ ವೀರಪ್ಪ ಮೊಯ್ಲಿಯವರು ಆಫೀಸರ್ಸನ್ನು ಕನ್‌ಸಲ್ಟ್‌ಮಾಡಿ, ನಮ್ಮ ಲೆಕ್ಕದ ಪ್ರಕಾರ ಎರಡು ಲಕ್ಷವೋ, ಮೂರು ಲಕ್ಷವೋ ಬರುತ್ತದೆ ಎಂದು ಹೇಳಿದರು. ಇದನ್ನು ಇಮ್ಮಿಡಿಯೇಟ್ಟಾಗಿ ಆನೌನ್ಸ್ ಮಾಡಿದರು. ಇಷ್ಟು ಹೇಳಿದ ಮೇಲೆ ಅವರಿಗೂ ಆಶ್ಚರ್ಯವಾಯಿತು. ಟೆಲಿಫೋನ್‌ನಲ್ಲಿ ಇವರು, ಅವರು ಮಾತನಾಡಿದರು. ಪೂರ್ತಿಯಾಗಿ ಇದನ್ನು ವಿಚಾರಮಾಡೋಣ, ಲೆಕ್ಕಾಚಾರ ನೋಡೋಣ, ಬ್ಯಾಂಕ್‌ನಲ್ಲಿ ಅಕೌಂಟ್ ನೋಡೋಣ ಎಂದು ಹೇಳಿದರು ಮಾನ್ಯ ಅರ್ಥ ಮಂತ್ರಿಗಳು ಮತ್ತು ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಅಲ್ಲಿಗೆ ಹೋದರು, ಚರ್ಚೆಮಾಡಿದರು. ಅವರು ನಮ್ಮ ಸ್ಟೇಟ್‌ಮೆಂಟ್ ತಪ್ಪಾಗಿದೆ ಎಂದು ಒಪ್ಪಿಕೊಂಡರು. ನಮ್ಮ ಲೆಕ್ಕದ ಪ್ರಕಾರ ಸುಮಾರು ೭೦ ಲಕ್ಷ ರೂಪಾಯಿ ಎಂದು ಕಾಣುತ್ತದೆ. As on today we are due to them about Rs. 70 to 80 lakhs. ಅದೆಲ್ಲಾ ಸಪರೇಟ್ ಇಷ್ಯೂ. ಈಗ ಪ್ರಶ್ನೆ ಏನಿದೆಯೆಂದರೆ, ನಮಗೆ ಪವರ್ ಬೇಕಾಗಿದೆ, ಅವರ ಹತ್ತಿರ ಸರ್ಪ್ಲಸ್ ಪವರ್ ಇದೆ. ಇದರಲ್ಲಿ ಜಗಳ ಮಾಡುವುದು ಬೇಡ. ನಮ್ಮ ವಿದ್ಯುಚ್ಛಕ್ತಿ ಮಂತ್ರಿಗಳು ಮತ್ತು ನಮ್ಮ ಹಣಕಾಸಿನ ಮಂತ್ರಿಗಳು ಹೋಗಿ ಮಾತುಕತೆ ನಡೆಸಿದ್ದರಿಂದ ವಿದ್ಯುಚ್ಛಕ್ತಿ ಒಂದು ರೀತಿಯಲ್ಲಿ ಏನು ನಿಲ್ಲಿಸಿದ್ದರೋ ಅದನ್ನು ಈಗ ಕೊಡುತ್ತಾ ಬರುತ್ತಿದ್ದಾರೆ. ಇದರಲ್ಲಿ ಅವರನ್ನು ಜವಾಬ್ದಾರಿಕೆ ಮಾಡುತ್ತೇವೆ ಅಂದರೆ ಈ ಜವಾಬ್ದಾರಿಕೆ ಮಾತನ್ನು ನಿಲ್ಲಿಸಿ. ಕೇಂದ್ರದ ಜೊತೆ ಮತ್ತು ಇತರ ರಾಜ್ಯಗಳ ಜೊತೆ ವ್ಯವಹಾರ ಮಾಡುವಾಗ ಇದರಲ್ಲಾದರೂ ನಾವು ಒಟ್ಟಿಗೆ ಹೋಗೋಣ. ಈಗ ನೀವು ಏಕೆ ಲೀಗಲ್ಲಾಗಿ ಹೋಗಲಿಲ್ಲ, ಕೋರ್ಟಿಗೆ ಹೋಗುವ ರೀತಿಯಲ್ಲಿ ಕ್ಲಾಸ್ ಹಾಕಿಕೊಂಡು ಹೋಗಲಿಲ್ಲ ಅಂದರೆ, they are not at all legal. ನೀವು ನಮ್ಮನ್ನು ಜವಾಬ್ದಾರಿಕೆ ಮಾಡುವುದು, ನಾವು ಅವರ ಮೇಲೆ ಟೀಕೆ ಮಾಡುವುದು, ಅವರು ಒಂದು ಜನರೇಟರ್ ವರ್ಕ್ ಮಾಡುವುದಿಲ್ಲ ಅಂದರೆ, they stop power for another 15 days. This is all not in the interest of both the States and the people

ಶ್ರೀ ಎ. ಜಿ. ಕೊಡಗಿ.—ನಿಮ್ಮಿಬ್ಬರ ಜಗಳದಲ್ಲಿ ಕೂಸು ಬಡವಾಗುವುದು ಬೇಡ.

ಶ್ರೀ ಆರ್. ಗುಂಡೂರಾವ್.—ಗಂಡ ಹೆಂಡರ ಜಗಳದಲ್ಲಿ ಕೂಸು ಬಡವಾದ ಹಾಗೆ.

ಶ್ರೀ ಪಿ. ರಾಮದೇವ್.—ನಮ್ಮ ರಾಜ್ಯದಿಂದ ಇತರೆ ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ಕಡಿಮೆ ರೇಟಿಗೆ ಕೊಡುತ್ತಿದ್ದೇವೆ, ಅದನ್ನು ರಿವೈಸ್ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಬೇರೆಯವರು ಮಾಡಿದ್ದು ನಮಗೆ ಹೇಗೆ ಅಪ್ಲೈ ಆಗುತ್ತದೋ ಹಾಗೆಯೇ ನಾವು ಬೇರೆಯವರಿಗೆ ಅಪ್ಲೈ ಮಾಡುತ್ತೇವೆ. ತಾವು ಗೋವಾ ವಿಚಾರದಲ್ಲಿ ಹೇಳುತ್ತಿದ್ದೀರಿ ; ಅದನ್ನೂ ಹಾಕೊಂಡು. ರಾಜ್ಯದ ಹಿತವನ್ನು ಕಾಪಾಡುವ ದಿಶೆಯಲ್ಲಿ, ರಾಜ್ಯಕ್ಕೆ ನಷ್ಟವಾಗದಂತೆ ನೋಡಿಕೊಳ್ಳುವುದರಲ್ಲಿ ಅವರು ಇವರು ಎಂಬ ಬೇಧವಿಲ್ಲ, ಒಟ್ಟಿಗೆ ಅದನ್ನು ಮಾಡೋಣ. ಇವತ್ತು ಏನು ಫೈನಾನ್ಸ್ ಮಿನಿಸ್ಟರ್ ಒಪ್ಪಂದಪತ್ರವನ್ನು ಮಾಡಿಕೊಂಡು ಬಂದಿದ್ದಾರೆ, ಅದು ಸರಿ ಇದೆ. ಪುನಃ ಆಫೀಸರ್ಸನ್ನು ಕಳಿಸಿ ಮಾತನಾಡಿ, ಕರ್ನಾಟಕಕ್ಕೆ ಎಷ್ಟು ಕೊಡಬೇಕು ಎನ್ನುವುದನ್ನು ಏನು ಹೇಳುತ್ತಾರೋ ಅದನ್ನು ಸದನಕ್ಕೆ ತಿಳಿಸೋಣ. ಇವತ್ತು ೭೦-೮೦ ಲಕ್ಷ ರೂಪಾಯಿಗಳು ಎಂದು ಗೊತ್ತಾಗಿದೆ. ಸೆಂಟ್ರಲ್‌ಗೆ ಏನೂ ಪವರ್ ಇಲ್ಲ.

ಶ್ರೀ ಎಂ. ಪಿ. ಬಸಪ್ಪ.—ಈ ಸಮಾಧಾನವನ್ನು ಒಪ್ಪಿಕೊಳ್ಳುವುದಾದರೂ ಕೂಡ ಕೇರಳ ಮತ್ತು ಕರ್ನಾಟಕಕ್ಕೆ ಏನು ಅಗ್ರಿಮೆಂಟ್ ಆಗಿತ್ತು, ಅದರ ಬಗ್ಗೆ ಪ್ರಶ್ನೆ ಮಾಡುತ್ತಾ ಇಲ್ಲ. ಅವರು ಹೇಳಿದಂಥ ಕಂಡೀಷನ್‌ಗಳಿಗೆ ಒಪ್ಪಿಕೊಳ್ಳಲಾಗಿದೆ. ಈ ಒಂದು ಸನ್ನಿವೇಶ ಯಾರಿಂದ ಉದ್ಭವವಾಯಿತು ಅಂದರೆ ಯಾರು ಕೇರಳಕ್ಕೆ ಹಣವನ್ನು ಪಾವತಿ ಮಾಡಬೇಕಾಗಿತ್ತು ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸದೆ, ಲೆಕ್ಕಪತ್ರಗಳನ್ನು ಸರಿಯಾಗಿಟ್ಟುಕೊಳ್ಳದೆ ಇದ್ದುದರಿಂದ ಆಯಿತು. ಕರ್ನಾಟಕದಿಂದ ಇಷ್ಟು ಹಣ ಬರಬೇಕು ಎಂಬ ನೆಪವನ್ನು ಕಲ್ಪನೆ ಮಾಡಿಕೊಂಡು ನಮ್ಮ ಅಗ್ರಿಮೆಂಟನ್ನು ಮೂಲೆಗೆ ಇಟ್ಟರು. ೩ ವರ್ಷಗಳ ಕಾಲ ಕರ್ನಾಟಕಕ್ಕೆ ಬರಬೇಕಾದ ವಿದ್ಯುಚ್ಛಕ್ತಿಯನ್ನು ಕಡಿಮೆ ಮಾಡಿದರು ; ದರವನ್ನು ಜಾಸ್ತಿ ಮಾಡಿದರು. ಆದ್ದರಿಂದ ಈಗ ಏನು ಒಪ್ಪಂದ ಮಾಡಿಕೊಂಡಿದ್ದೀರಿ ಅದಕ್ಕೆ ಏನು ಸ್ಯಾಂಟಿಟಿ ಇರುತ್ತದೆ? ೭ ಕೋಟಿ ರೂಪಾಯಿ ಬಾಕಿಯಾಗುವುದಕ್ಕೆ ಯಾರು ಕಾರಣರು, ಇದರ ಜವಾಬ್ದಾರಿಯನ್ನು ಫಿಕ್ಸ್ ಮಾಡಿ, ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಆರ್. ಗುಂಡೂರಾವ್.—ನಮ್ಮ ಅಧಿಕಾರಿಗಳು ಸರಿಯಾಗಿ ನೋಡುತ್ತಿದ್ದಾರೆ, ನೋಡಿದ ಮೇಲೆ ವಿಚಾರ ಮಾಡೋಣ.

ELECTION OF DEPUTY SPEAKER

MR. SPEAKER.—Four Notices of Motions suggesting the name of Sri Bapu Rao Ananda Rao Hulsurkar for the office of the Deputy Speakership have been received. Motions will be moved in the order indicated in the list of Business. I now, call upon Sri K. Gangadhar, (Minister of State for Information and Youth Services) to move the Motion standing against his name and Sri B. N. Kenge Gowda to second the Motion.

SRI K. GANGADHAR (Minister of State for Information and Youth Services).—Sir, I beg to move.—

> "That Sri Bapu Rao Anand Rao Hulsurkar be elected Deputy Speaker of the Legislative Assembly."

ಶ್ರೀ ಬಿ. ಎನ್. ಕೆಂಗೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶ್ರೀ ಕೆ. ಗಂಗಾಧರ್ ಅವರು ಮುಂಡಿಸಿರುವ ನಿರ್ಣಯವನ್ನು ಅನುಮೋದಿಸುತ್ತೇನೆ.